ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 06-02-1980.

# *ಅಶರೀರಿಯಾಗುವ ಸಹಜವಿಧಿ*

(अशरीरी बनने की सहज विधि)

ಇಂದು ಕಲ್ಪಪೂರ್ವದ ಅಗಲಿ ಮರಳಿ ಸಿಕ್ಕಿರುವ ಅತಿಮುದ್ದಾದ, ಸ್ನೇಹಿ ಮತ್ತು ಸಹಯೋಗಿ, ಶಕ್ತಿ ಸ್ವರೂಪ ಮಕ್ಕಳೊಂದಿಗೆ ಮಿಲನ ಮಾಡುವುದಕ್ಕಾಗಿ ಬಂದಿದ್ದೇವೆ. ಬಾಪ್‌ದಾದಾರವರು ತನ್ನ ಸಹಯೋಗಿ ಮಕ್ಕಳ ಜೊತೆಯಲ್ಲಿಯೇ ಇರುತ್ತಾರೆ. ಸಹಯೋಗ ಮತ್ತು ಸ್ನೇಹದ ತುಂಡಾಗದ ಸಂಬಂಧವು ಸದಾ ಅವಿನಾಶಿಯಾಗಿರುತ್ತದೆ. ಇಂದು ವತನದಲ್ಲಿ ಬಾಪ್‌ದಾದಾರವರು ಪ್ರಿಯಾತಿಪ್ರಿಯ ಮಕ್ಕಳ ಸ್ನೇಹದ ಮಾಲೆಯನ್ನು ತಯಾರು ಮಾಡುತ್ತಿದ್ದರು. ಸ್ನೇಹಿಯಂತು ಎಲ್ಲರೂ ಆಗಿದ್ದಾರೆ, ಆದರೂ ಸಹ ನಂಬರ್‌ವಾರ್ ಎಂದು ಹೇಳುತ್ತೇವೆ. ಇಂದು ಪ್ರತಿಯೊಂದು ಮಕ್ಕಳ ವಿಶೇಷತೆಗಳ ಆಧಾರದ ಮೇಲೆ ನಂಬರನ್ನು ಮಾಡುತ್ತಿದ್ದರು. ಕೆಲವು ಮಕ್ಕಳಲ್ಲಿ ವಿಶೇಷತೆ ಇಷ್ಟೂ ಹೆಚ್ಚಿನದಾಗಿ ಕಂಡು ಬರುತ್ತಿದ್ದವು. ಅವರು ಸಂಪೂರ್ಣವಾಗಿ ಬಾಪ್‌ಸಮಾನ ಸಮೀಪರತ್ನವೆಂದು ನೋಡಿದೆವು. ಕೆಲವು ಮಕ್ಕಳು ವಿಶೇಷತೆಗಳನ್ನು ಧಾರಣೆ ಮಾಡಿಕೊಳ್ಳುವುದರಲ್ಲಿ ಪರಿಶ್ರಮ ಪಡುತ್ತಿರುವುದನ್ನೇ ನೋಡಿದೆವು, ಅವರ ಪರಿಶ್ರಮವನ್ನು ನೋಡಿ ತಂದೆಗೂ ದಯೆಬರುತ್ತದೆ. ನನ್ನ ಮಕ್ಕಳು ಮತ್ತೆ ಪರಿಶ್ರಮ! ಏಕೆಂದರೆ ಎಲ್ಲದಕ್ಕಿಂತ ಹೆಚ್ಚಿನ ಪರಿಶ್ರಮವನ್ನು ಅಶರೀರಿಯಾಗುವುದರಲ್ಲಿ ನೋಡಿದೆವು.

ಬಾಪ್‌ದಾದಾರವರು ಈ ವಿಷಯದ ಬಗ್ಗೆ ಪರಸ್ಪರದಲ್ಲಿ ಮಾತನಾಡಿದರು - ಅಶರೀರಿ ಆತ್ಮನಿಗೆ ಅಶರೀರಿಯಾಗುವುದರಲ್ಲಿ ಪರಿಶ್ರಮವೇಕೆ? ಬ್ರಹ್ಮಾತಂದೆಯು ಹೇಳಿದರು **84 ಜನ್ಮಗಳಲ್ಲಿ ವಸ್ತ್ರವನ್ನು ಧಾರಣೆ ಮಾಡಿಕೊಂಡು ಪಾತ್ರವನ್ನಭಿನಯಿಸಿರುವ ಕಾರಣ, ಪಾತ್ರವನ್ನು ಅಭಿನಯಿಸುತ್ತಾ ಅಭಿನಯಿಸುತ್ತಾ ಶರೀರಧಾರಿಯಾಗಿ ಬಿಡುತ್ತಾರೆ.** ಶಿವತಂದೆಯು ಹೇಳಿದರು - “ಪಾತ್ರವನ್ನು ಅಭಿನಯಿಸಿದರು. ಆದರೆ ಈಗ ಎಂತಹ ಸಮಯವಾಗಿದೆ? ಸಮಯದ ಸ್ಮೃತಿಯನುಸಾರವಾಗಿ ಕರ್ಮವೂ ಸ್ವತಹವಾಗಿ ಹಾಗೆಯೇ ಆಗುತ್ತದೆ. ಇದರ ಅಭ್ಯಾಸಿಯಾಗಿದ್ದೀರಲ್ಲವೆ?” ತಂದೆಯು ಹೇಳಿದರು “ಈಗ ಪಾತ್ರವನ್ನು ಸಮಾಪ್ತಿ ಮಾಡಿ ಮನೆಗೆ ಹೋಗಬೇಕಾಗಿದೆ. ಪಾತ್ರದ ವಸ್ತ್ರವನ್ನಂತು ಬಿಡಬೇಕಾಗುತ್ತದೆಯಲ್ಲವೆ? ಮನೆಗೆ ಹೋಗಬೇಕಾಗಿದೆ. ಇದಕ್ಕೂ ಸಹ ಹಳೆಯ ಶರೀರವನ್ನು ಬಿಡಬೇಕಾಗುತ್ತದೆ. ರಾಜ್ಯದಲ್ಲಿ ಅರ್ಥಾತ್ ಸ್ವರ್ಗದಲ್ಲಿ ಹೋಗಬೇಕೆಂದರೂ ಈ ಹಳೆಯ ವಸ್ತ್ರವನ್ನು ಬಿಡಬೇಕಾಗುತ್ತದೆ. ಅಂದಮೇಲೆ ಹೋಗಲೇಬೇಕಾದಾಗ ಮರೆಯುವುದೇಕೆ ಕಷ್ಟವಾಗುತ್ತದೆ? ಹೋಗಬೇಕು ಎನ್ನುವುದನ್ನು ಮರೆತುಹೋಗುತ್ತಾರೆಯೇ? ತಾವೆಲ್ಲರೂ ಹೋಗುವುದಕ್ಕಾಗಿ ಎವರೆಡಿ ಇದ್ದೀರಾ ಅಥವಾ ಈಗಲೂ ಸ್ವಲ್ಪ ಬಂಧನಗಳಲ್ಲಿ ಬಂಧಿತವಾಗಿದೆಯೇ? ಎವರೆಡಿಯಿದ್ದೀರಲ್ಲವೆ?”

ಬಾಪ್‌ದಾದಾರವರು ಈಗ ಸೇವೆಗಾಗಿ ಸಮಯವನ್ನು ಕೊಟ್ಟಿದ್ದಾರೆ. ಸೇವಾಧಾರಿಗಳ ಪಾತ್ರವನ್ನು ಅಭಿನಯಿಸುತ್ತಿದ್ದೀರಿ ಅಂದಮೇಲೆ ತಮ್ಮನ್ನು ನೋಡಿಕೊಳ್ಳಿರಿ- ಈ ಶರೀರದ ಬಂಧನವಂತು ಇಲ್ಲ ತಾನೇ? ಅಥವಾ ಈ ಹಳೆಯವಸ್ತ್ರವು ಬಿಗಿಯಾಗಿಲ್ಲ ತಾನೇ? ಬಿಗಿ(ಟೈಟ್) ಆಗಿರುವ ವಸ್ತ್ರವನ್ನಂತು ಇಷ್ಟಪಡುತ್ತಿಲ್ಲ ಅಲ್ಲವೆ? ವಸ್ತ್ರವು ಬಿಗಿಯಾಗಿದ್ದರೆ ಎವರೆಡಿಯಾಗುವುದಿಲ್ಲ. ಬಂಧನಮುಕ್ತ ಅರ್ಥಾತ್ ಸಡಿಲವಾದ ವಸ್ತ್ರ, ಬಿಗಿಯಾಗಿರುವುದಲ್ಲ. ಆದೇಶವು ಸಿಕ್ಕಿತು ಮತ್ತು ಸೆಕೆಂಡಿನಲ್ಲಿ ಹೊರಟೆನು. ಇಂತಹ ಬಂಧನಮುಕ್ತ, ಯೋಗಯುಕ್ತರಾಗಿದ್ದೀರಾ? ಯಾವಾಗ ಪ್ರತಿಜ್ಞೆಯೇ ಇದೆ-'ಒಬ್ಬ ತಂದೆಯ ವಿನಃ ಮತ್ತಾರೂ ಇಲ್ಲ' ಅಂದಮೇಲೆ ಬಂಧನಮುಕ್ತರಾಗಿದ್ದೀರಲ್ಲವೆ. ಅಶರೀರಿಯಾಗುವುದಕ್ಕಾಗಿ ವಿಶೇಷವಾಗಿ 4 ಮಾತುಗಳ ಗಮನ ವನ್ನಿಡಬೇಕು.

1. ಪ್ರಪಂಚದವರೂ ಸಹ ತಮ್ಮನ್ನು ತಾವು ಮರೆತು ಹೋಗಬೇಕಾದರೆ  ಒಂದು ಸತ್ಯವಾದ ಪ್ರೀತಿಯಲ್ಲಿ ಮುಳುಗಿಬಿಡುತ್ತಾರೆ. ಅಂದಮೇಲೆ ಸತ್ಯಪ್ರೀತಿಯೇ ಮರೆಯಲು ಸಹಜಸಾಧನವಾಗಿದೆ. ಪ್ರೀತಿಯು ಪ್ರಪಂಚವನ್ನು ಮರೆಸಲು ಸಾಧನವಾಗಿದೆ, ದೇಹವನ್ನು ಮರೆಸುವ ಸಾಧನವಾಗಿದೆ.

2. ಇನ್ನೊಂದು ಮಾತು- ಸತ್ಯಮಿತ್ರನೂ ಸಹ ಪ್ರಪಂಚವನ್ನು ಮರೆಸಲು ಸಾಧನವಾಗಿದೆ. ಒಂದುವೇಳೆ ಇಬ್ಬರು ಮಿತ್ರರು ಪರಸ್ಪರದಲ್ಲಿ ಸೇರುತ್ತಾರೆಂದರೆ, ಅವರಿಗೆ ಸ್ವಯಂನ ಅಥವಾ ಸಮಯದ ಸ್ಮೃತಿಯಾಗಲಿ ಇರುವುದಿಲ್ಲ.

3. ಮೂರನೆಯ ಮಾತು- ಹೃದಯದ (ಮನಸ್ಪೂರ್ವಕ) ಗೀತೆ- ಒಂದು ವೇಳೆ ಹೃದಯದಿಂದ ಯಾವುದೇ ಗೀತೆಯನ್ನು ಹಾಡುತ್ತಿರುವಾಗ ಆ ಸಮಯಕ್ಕಾಗಿ ಸ್ವಯಂ ಹಾಗೂ ಸಮಯವನ್ನು ಮರೆತಿರುತ್ತಾರೆ.

4. ನಾಲ್ಕನೆಯ ಮಾತು - ಯಥಾರ್ಥ ರೀತಿ(ವಿಧಿ). ಒಂದು ವೇಳೆ ಯಥಾರ್ಥ ರೀತಿಯಿದೆಯೆಂದರೆ ಅಶರೀರಿಯಾಗುವುದು ಬಹಳ ಸಹಜ. ರೀತಿ(ಪದ್ಧತಿ) ಬರುವುದಿದ್ದಾಗ ಕಷ್ಟವಾಗುತ್ತದೆ. ಅಂದಾಗ ಒಂದು ಪ್ರೀತಿ 2.ಸತ್ಯ ಮಿತ್ರ 3.ಗೀತೆ(ಮನಸ್ಪೂರ್ವಕ ಹಾಡು) 4.ರೀತಿ(ಪದ್ದತಿ). (ಪ್ರೀತ್, ಮೀತ್, ಗೀತ್, ರೀತ್).

**ನೀವೊಬ್ಬರು ಸಿಕ್ಕಾಗಿನಿಂದ ಇಡೀ ಪ್ರಪಂಚವು ಸಿಕ್ಕ ಹಾಗಿದೆ.**

ತಾವೆಲ್ಲರೂ ಈ ನಾಲ್ಕೂಮಾತುಗಳಲ್ಲಿ ಅನುಭವಿಯಾಗಿದ್ದೀರಲ್ಲವೆ? ಪ್ರೀತಿಯಲ್ಲಿಯೂ ಅನುಭವಿಯಾಗಿದ್ದೀರಿ. ತಂದೆ ಹಾಗೂ ತಾವು, ಮೂರನೆಯವರು ಇಲ್ಲ. ತಂದೆಯು ಸಿಕ್ಕರು ಎಂದರೆ ಎಲ್ಲವೂ ಸಿಕ್ಕಿತು, ಬಾಕಿ ಇನ್ನೇನು ಕೆಲಸವಿದೆ. ಪ್ರಭುವಿನ ಪ್ರೀತಿಯ ಬಗ್ಗೆ ವರ್ತಮಾನದ ಭಕ್ತರೂ ಕೀರ್ತನೆ ಮಾಡುತ್ತಿರುತ್ತಾರೆ. ಕೇವಲ ಪ್ರೀತಿಯ ಗೀತೆಯಲ್ಲಿಯೇ ಮುಳುಗಿ ಬಿಡುತ್ತಾರೆ, ಅಂದಮೇಲೆ ಯೋಚನೆ ಮಾಡಿರಿ- ಪ್ರೀತಿಯನ್ನು ನಿಭಾಯಿಸುವವರು ಇನ್ನೆಷ್ಟು ಮುಳುಗಿರಬಹುದು! ಪ್ರೀತಿಯಲ್ಲಂತು ಅನುಭವಿಯಾಗಿದ್ದೀರಲ್ಲವೆ? ವಿಪರೀತ ಬುದ್ಧಿಯಿಂದ ಪ್ರೀತ ಬುದ್ಧಿಯವರಾಗಿದ್ದೀರಲ್ಲವೆ? ಅಂದಮೇಲೆ ಎಲ್ಲಿ ಪ್ರಭುಪ್ರೀತಿಯಿದೆ, ಅಲ್ಲಿ ಅಶರೀರಿಯಾಗುವುದು ಹೇಗೆನಿಸುತ್ತದೆ? ಪ್ರೀತಿಯ ಮುಂದೆ ಅಶರೀರಿಯಾಗುವುದು ಒಂದು ಸೆಕೆಂಡಿನ ಆಟದ ಸಮಾನವಾಗಿದೆ. ಬಾಬಾ ಎಂದು ಹೇಳಿದೆವು ಮತ್ತು ಶರೀರವನ್ನು ಮರೆತೆವು. ಬಾಬಾ ಶಬ್ದವೇ ಹಳೆಯ ಪ್ರಪಂಚವನ್ನು ಮರೆಯುವ ಆತ್ಮಿಕ ಬಾಂಬ್ ಆಗಿದೆ. (ವಿದ್ಯುತ್ ಬಂದ್ ಆಯಿತು) ಹೇಗೆ ಈ ಸ್ವಿಚ್ ಬದಲಾಗುವ ಆಟವನ್ನು ತೋರಿಸಿತು, ಹಾಗೆಯೇ ಅದು ಸ್ಮೃತಿಯ ಸ್ವಿಚ್ ಆಗಿದೆ. ತಂದೆಯ ಸ್ವಿಚ್ ಆನ್ ಮತ್ತು ದೇಹ ಹಾಗೂ ದೇಹದ ಪ್ರಪಂಚದ ಸ್ಮೃತಿಯ ಸ್ವಿಚ್ ಆಫ್, ಇದು ಒಂದು ಸೆಕೆಂಡಿನ ಆಟವಾಗಿದೆ. ಮುಖದಿಂದ ಬಾಬಾ ಎಂದು ಹೇಳುವುದರಲ್ಲಿಯೂ ಸಮಯವು ಹಿಡಿಸುತ್ತದೆ ಆದರೆ ಸ್ಮೃತಿಯಲ್ಲಿ ತರುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ. ಅಂದಮೇಲೆ ಪ್ರೀತಿಯಲ್ಲಿರುವುದು ಅರ್ಥಾತ್ ಸಹಜವಾಗಿ ಅಶರೀರಿಯಾಗುವುದಾಗಿದೆ.

**ಪ್ರೀತಿಯಲ್ಲಿ ಪರಿಶ್ರಮವಿಲ್ಲ.**

ಸ್ಮಶಾನದ ಮುಂದೆಯೂ ಜೊತೆಯಲ್ಲಿಯೇ ಹೋಗುವವಂತಹ ಸತ್ಯಮಿತ್ರನಾಗಿರಬೇಕು. ಶರೀರಧಾರಿ ಮಿತ್ರನಂತು ಸ್ಮಶಾನದವರೆಗೇ ಹೋಗುತ್ತಾರೆ, ಅಂದಾಗ ಅವರು ದುಃಖಹರ್ತ- ಸುಖಕರ್ತನಾಗಲು ಸಾಧ್ಯವಿಲ್ಲ. ದುಃಖದ ಸಮಯದಲ್ಲಿ ಅಲ್ಪಸ್ವಲ್ಪ ಸಹಯೋಗಿಯಾಗಬಹುದು. ಸಹಯೋಗವನ್ನು ಕೊಡಬಹುದು ಆದರೆ ದುಃಖವನ್ನು ಹರಣ ಮಾಡಲು ಸಾಧ್ಯವಿಲ್ಲ. ಅಂದಮೇಲೆ ಸತ್ಯಮಿತ್ರನು ಸಿಕ್ಕುಬಿಟ್ಟನಲ್ಲವೇ? ಸದಾ ಇದೇ ಅವಿನಾಶಿ ಮಿತ್ರನ ಜೊತೆಯಿದ್ದಾಗ ಪ್ರೀತಿಯಲ್ಲಿ ಪರಿಶ್ರಮವು ಸಮಾಪ್ತಿಯಾಗಿ ಬಿಡುತ್ತದೆ. ಯಾವಾಗ ಪ್ರೀತಿ ಮಾಡುವುದು ಬರುತ್ತದೆ, ಅಂದಮೇಲೆ ಪರಿಶ್ರಮವನ್ನೇಕೆ ಪಡುತ್ತೀರಿ? ಬಾಪ್‌ದಾದಾರವರಿಗೆ

ಕೆಲಕೆಲವೊಮ್ಮೆ ನಗು ಬರುತ್ತದೆ. ಹೇಗೆ ಯಾರಿಗಾದರೂ ಹೊರೆಯನ್ನು ಹೊತ್ತುಕೊಳ್ಳುವ ಅಭ್ಯಾಸವಿದ್ದರೆ ಅವರಿಗೆ ಆರಾಮವಾಗಿ ಕುಳ್ಳರಿಸಿದರೂ ಕುಳಿತುಕೊಳ್ಳಲು ಸಾಧ್ಯವಿಲ್ಲ. ಮತ್ತೆ-ಮತ್ತೆ ಹೊರೆಯ ಕಡೆಯೇ ಓಡುತ್ತಾರೆ, ಆನಂತರದಲ್ಲಿ ಉಸಿರನ್ನೂ ಬಿಡುತ್ತಾರೆ. ಆಗ ನನ್ನನ್ನು ಮುಕ್ತಗೊಳಿಸಿರಿ ಎಂದು ಕರೆಯುತ್ತಾರೆ. ಅಂದಾಗ ಸದಾ ಪ್ರೀತಿ ಹಾಗೂ ಮಿತ್ರತ್ವದಲ್ಲಿರುತ್ತೀರೆಂದರೆ ಪರಿಶ್ರಮವು ಸಮಾಪ್ತಿಯಾಗಿಬಿಡುತ್ತದೆ. ಮಿತ್ರನಿಂದ ದೂರವಾಗಬಾರದು, ಸದಾ ಜೊತೆಗಾರನಾಗಿರುತ್ತಾ ನಡೆಯಿರಿ.

ಇದೇ ರೀತಿ ಬಾಪ್‌ದಾದಾರವರ ಮೂಲಕ ಪ್ರಾಪ್ತಿಯಾಗಿರುವ ಸರ್ವ ಪ್ರಾಪ್ತಿಗಳ, ಗುಣಗಳ ಗೀತೆಯನ್ನು ಸದಾ ಹಾಡುತ್ತಿರಬೇಕು. ತಂದೆಯ ಮಹಿಮೆ ಅಥವಾ ತಮ್ಮ ಮಹಿಮೆಯ ಗೀತೆಯು ಎಷ್ಟೊಂದಿದೆ, ಈ ಗೀತೆಯಲ್ಲಿ ವಾದ್ಯವೂ ಸಹಜವಾಗಿ ಮೊಳಗುತ್ತದೆ. ಎಷ್ಟೆಷ್ಟು ಗುಣಗಳ ಮಹಿಮೆಯನ್ನು ಹಾಡುತ್ತೀರಿ, ಖುಷಿಯ ವಾದ್ಯಗಳೂ ಜೊತೆಜೊತೆಯಲ್ಲಿಯೇ ಮೊಳಗುತ್ತಿರುತ್ತದೆ. ಇಲ್ಲಿಯೂ ಗೀತೆಯನ್ನು ಹಾಡುವವರು ಬಂದಿದ್ದಾರೆ (ಭರತ್‌ರಾಸ್ ಮುಂತಾದವರು ಬಂದಿದ್ದಾರೆ) ತಮ್ಮ ವಾದ್ಯವಂತು ಬೇರೆ ಆಗಿದೆ. ಇದು ಖುಷಿಯ ವಾದ್ಯವಾಗಿದೆ. ಇದೆಂದಿಗೂ ರಿಪೇರಿಯಾಗುವಂತಾಗುವುದಿಲ್ಲ. ಅಂದಮೇಲೆ ಸದಾ ಇಂತಹ ಗೀತೆಯನ್ನು ಹಾಡುತ್ತಾ ಇರಬೇಕು. ಈ ಗೀತೆಯನ್ನು ಹಾಡುವುದಂತು ಎಲ್ಲರಿಗೂ ಬರುತ್ತದೆಯಲ್ಲವೆ. ಅಂದಮೇಲೆ ಸದಾ ಗೀತೆಯನ್ನು ಹಾಡುತ್ತಿದ್ದಾಗ ಸಹಜವಾಗಿಯೇ ಅಶರೀರಿಯಾಗಿಬಿಡುತ್ತೀರಿ. ಉಳಿದಿರುವುದು ರೀತಿ- ಯಥಾರ್ಥ ರೀತಿಯು ಸೆಕೆಂಡಿನ ರೀತಿಯಾಗಿದೆ. " ನಾನು ಅಶರೀರಿ ಆತ್ಮನಾಗಿದ್ದೇನೆ". ಇದು ಎಲ್ಲದಕ್ಕಿಂತಲೂ ಸಹಜವಾದ ಯಥಾರ್ಥ ರೀತಿಯಾಗಿದೆ. ಸಹಜವಲ್ಲವೆ. ಹೇಗೆತಂದೆಯ ಮಹಿಮೆಯಿದೆ. ಅವರೇ ಕಷ್ಟವನ್ನು ಸಹಜ ಮಾಡುವವರು. ಇದೇ ರೀತಿ ತಂದೆಯ ಸಮಾನ ಮಕ್ಕಳೂ ಸಹ ಕಷ್ಟವನ್ನು ಸಹಜ ಮಾಡುವವರಾಗಿದ್ದೀರಿ. ಯಾರು ವಿಶ್ವದ ಕಷ್ಟವನ್ನು ಸಹಜ ಮಾಡುವವರಾಗಿದ್ದಾರೆಯೋ, ಅವರು ಸ್ವಯಂ ಕಷ್ಟವನ್ನು ಅನುಭವ ಮಾಡುವುದು ಹೇಗೆ ಸಾಧ್ಯ! ಆದ್ದರಿಂದ ಸದಾ ಸರ್ವರೂ ಸಹಜಯೋಗಿಗಳಾಗಿದ್ದೀರಿ.

**ಅಹಂ ಮತ್ತು ಸಂಶಯ ಭಾವವನ್ನು ಬಿಟ್ಟು ದಯಾ ಹೃದಯಿಯಾಗಿರಿ.**

ಸಂಗಮಯುಗೀ ಬ್ರಾಹ್ಮಣನ ಮುಖದಿಂದ 'ಪರಿಶ್ರಮ'ವಿದೆ ಅಥವಾ 'ಕಷ್ಟ'ವಿದೆ- ಈ ಶಬ್ಧವು ಮುಖದಿಂದಲ್ಲ ಆದರೆ ಸಂಕಲ್ಪದಲ್ಲಿಯೂ ಬರಲು ಸಾಧ್ಯವಿಲ್ಲ. ಅಂದಮೇಲೆ ಈ ವರ್ಷದಲ್ಲಿ ವಿಶೇಷ ಗಮನವು 'ಸದಾ ಸಹಜಯೋಗಿ' ಆಗಿರುವುದರ ಮೇಲಿರಬೇಕು. ಹೇಗೆ ತಂದೆಗೆ ಮಕ್ಕಳ ಬಗ್ಗೆ ದಯೆಬರುತ್ತದೆ. ಹಾಗೆಯೇ ಸ್ವಯಂನ ಮೇಲೂ ದಯೆತೋರಿಸಿರಿ ಮತ್ತು ಸರ್ವರ ಪ್ರತಿಯೂ ದಯಾಹೃದಯಿಯಾಗಿರಿ. 'ದಯಾಹೃದಯ' ಎನ್ನುವ ಟೈಟಲ್ ಎಲ್ಲರಿಗೂ ಇದೆಯಲ್ಲವೆ? ತಮ್ಮ ಟೈಟಲ್ ನೆನಪಿದೆಯಲ್ಲವೆ? ಆದರೆ ದಯಾಹೃದಯಿಯಾಗುವ ಬದಲು ಒಂದು ಚಿಕ್ಕದಾದ ತಪ್ಪು ಮಾಡುತ್ತೀರಿ. ದಯಾಭಾವಕ್ಕೆ ಬದಲಾಗಿ ಅಹಂಭಾವದಲ್ಲಿ ಬಂದು ಬಿಡುತ್ತೀರಿ. ಆದ್ದರಿಂದ ದಯೆಯನ್ನು ಮರೆತುಹೋಗುತ್ತೀರಿ, ಕೆಲವರು ಅಹಂಭಾವದಲ್ಲಿ ಬರುತ್ತಾರೆ, ಕೆಲವರು 'ಸಂಶಯಭಾವದಲ್ಲಿ ಬಂದು ಬಿಡುತ್ತಾರೆ, ತಲುಪುತ್ತೇವೆಯೇ ಅಥವಾ ತಲುಪಲು ಸಾಧ್ಯವಾಗುವುದಿಲ್ಲವೋ ಗೊತ್ತಿಲ್ಲ? ಯಥಾರ್ಥ ಮಾರ್ಗವಿದೆಯೋ ಅಥವಾ ಇಲ್ಲವೋ- ಇಂತಹ ಅನೇಕ ಪ್ರಕಾರದ ಸಂಶಯಭಾವ ಮತ್ತು ಕೆಲವೊಮ್ಮೆ ಜ್ಞಾನದ ಬಗ್ಗೆಯೂ ಅಭಿಮಾನವುಂಟಾಗುತ್ತದೆ. ಆದ್ದರಿಂದ ದಯಾಭಾವವು ಬದಲಾಗಿ ಬಿಡುತ್ತದೆ, ತಿಳಿಯಿತೆ? ಹೃದಯವಿಧೀರ್ಣ(ಮಾನಸಿಕ ಬಲಹೀನತೆ) ಆಗಬಾರದು ಆದರೆ ಸದಾ ದಯಾಹೃದಯ ಸಿಂಹಾಸನಾಧಿಕಾರಿಯಾಗಿರಿ, ಅಂದಮೇಲೆ ಈ ವರ್ಷದಲ್ಲಿ ಏನು ಮಾಡಬೇಕು? ತಿಳಿಯಿತೆ, ಈ ವರ್ಷದ ಹೋಮ್‌ವರ್ಕ್ ಕೊಡುತ್ತಿದ್ದೇವೆ- 'ಸಹಜಯೋಗಿಯಾಗಿರಿ' ದಯಾಹೃದಯಿಯಾಗಿರಿ ಮತ್ತು ಹೃದಯ ಸಿಂಹಾಸನಾಧಿಕಾರಿಯಾಗಿರಿ, ಅಂದಮೇಲೆ ಸದಾ ಭಾಗ್ಯವಿದಾತ ತಂದೆಯು, ಈ ರೀತಿ ಆಜ್ಞಾಕಾರಿ ಮಕ್ಕಳಿಗೆ ಪ್ರತಿನಿತ್ಯವೂ ಅಮೃತವೇಳೆಯಲ್ಲಿ ಸಫಲತೆಯ ತಿಲಕವನ್ನಿಡುತ್ತಾರೆ. ಈ ತಿಲಕದ ಗಾಯನವೂ ಇದೆಯಲ್ಲವೆ- ಭಗವಂತನು ಭಕ್ತರಿಗೆ ತಿಲಕವನ್ನಿಡುವುದಕ್ಕಾಗಿ ಬಂದರು, ಅಂದಮೇಲೆ ಈ ವರ್ಷದಲ್ಲಿ ಆಜ್ಞಾಕಾರಿ ಮಕ್ಕಳಿಗೆ ಸ್ವಯಂ ತಂದೆಯು ತಮ್ಮ ಸೇವಾಸ್ಥಾನ ಅರ್ಥಾತ್ ತೀರ್ಥಸ್ಥಾನದಲ್ಲಿ, ಸಫಲತೆಯ

ತಿಲಕವನ್ನಿಡಲು ಬರುತ್ತಾರೆ. ತಂದೆಯಂತು ಪ್ರತಿನಿತ್ಯವೂ ಪರಿಕ್ರಮಣ ಹಾಕುತ್ತಿರುತ್ತಾರೆ. ಒಂದು ವೇಳೆ ಮಕ್ಕಳು ಮಲಗಿದ್ದರೆ, ಅದು ಅವರ ತಪ್ಪಾಗಿದೆ.

ಹೇಗೆ ದೀಪಾವಳಿಯಲ್ಲಿ ಎಲ್ಲಾ ಸ್ಥಾನಗಳಲ್ಲಿ ಜ್ಯೋತಿಯನ್ನು ಬೆಳಗಿಸಿಡುತ್ತಾರೆ. ಸ್ವಚ್ಛತೆಯನ್ನೂ ಮಾಡುತ್ತಾರೆ, ಆಹ್ವಾನವನ್ನೂ ಮಾಡುತ್ತಾರೆ. 'ಸ್ವಚ್ಛತೆ, ಪ್ರಕಾಶ ಮತ್ತು ಆಹ್ವಾನ'- ಅವರು ಲಕ್ಷ್ಮಿಯ ಆಹ್ವಾನವನ್ನು ಮಾಡುತ್ತಾರೆ ಮತ್ತು ಇದು ಲಕ್ಷ್ಮಿಯ ರಚಯಿತನ ಆಹ್ವಾನವಾಗಿದೆ. ಅಂದಮೇಲೆ ಜ್ಯೋತಿಯನ್ನು ಬೆಳಗಿಸುತ್ತಾ ಕುಳಿತುಕೊಂಡಾಗ ತಂದೆಯು ಬರುತ್ತಾರೆ. ಕೆಲವರನ್ನಂತು ಜಾಗೃತಗೊಳಿಸಲಾಗುತ್ತದೆ, ಆದರೂ ಮಲಗಿ ಬಿಡುತ್ತಾರೆ. ಶಬ್ದದ ಅನುಭವವೂ ಆಗುತ್ತದೆ, ಆದರೂ ಹುಡುಗಾಟಿಕೆಯ ನಿದ್ರೆಯಲ್ಲಿ ಮಲಗಿ ಬಿಡುತ್ತಾರೆ. ಸತ್ಯಯುಗದಲ್ಲಿ ಚಿನ್ನವೇ ಚಿನ್ನವಿರುತ್ತದೆ. ಡಬಲ್ ಚಿನ್ನವಿರುತ್ತದೆ. ಆದ್ದರಿಂದ ಈ ಜಾಗೃತ ಜ್ಯೋತಿಯಾಗಿರಿ. ಈ ರೀತಿಯಲ್ಲ- ಮಲಗುವ ಸಂಸ್ಕಾರದಿಂದ ಅಲ್ಲಿ ಚಿನ್ನವು ಸಿಗುತ್ತದೆ. ಯಾರು ಜಾಗೃತರಾಗುತ್ತಾರೋ ಅವರು ಚಿನ್ನವನ್ನು ಪಡೆಯುತ್ತಾರೆ. ಹುಡುಗಾಟಿಕೆಯ ನಿದ್ರೆಯೂ ವಿನಾಶ ಕಾಲವನ್ನು ಮರೆತಾಗ ಬರುತ್ತದೆ. ಭಕ್ತರ ಕೂಗನ್ನು ಕೇಳಿಸಿಕೊಳ್ಳಬೇಕು. ದುಃಖಿ ಅತ್ಮರ ಕೂಗನ್ನು ಕೇಳಿಸಿಕೊಳ್ಳಿರಿ, ಬಾಯಾರಿರುವ ಆತ್ಮರ ಪ್ರಾರ್ಥನೆಯ ಧ್ವನಿಯನ್ನು ಕೇಳಿಸಿಕೊಂಡರೆ ಎಂದಿಗೂ ನಿದ್ರೆಯು ಬರುವುದಿಲ್ಲ. ಅಂದಮೇಲೆ ಈ ವರ್ಷದಲ್ಲಿ ಹುಡುಗಾಟಿಕೆಯ ನಿದ್ರೆಗೆ ವಿಚ್ಛೇದನವನ್ನು ಕೊಡಬೇಕಾಗಿದೆ. ಆಗಲೇ ಭಕ್ತರಿಗೆ ತಮ್ಮ ಸಾಕ್ಷಾತ್ಕಾರ ಮೂರ್ತಿಗಳ ಸಾಕ್ಷಾತ್ಕಾರವನ್ನು ಮಾಡಿಸುತ್ತೀರಿ, ಅಂದಮೇಲೆ ಈ ವರ್ಷದಲ್ಲಿ ಸಾಕ್ಷಾತ್ಕಾರ ಮೂರ್ತಿಯಾಗಿ ಭಕ್ತರಿಗೆ ಸಾಕ್ಷಾತ್ಕಾರವನ್ನು ಮಾಡಿಸಿರಿ. ಇಂತಹ ಚಕ್ರವರ್ತಿಯಾಗಿರಿ,

**ಈ ರೀತಿ ಸದಾ ಪ್ರೀತಿಯನ್ನು ನಿಭಾಯಿಸುವವರು, ಸದಾ ಸತ್ಯವಾದ ಮಿತ್ರನ ಜೊತೆಯಲ್ಲಿರುವವರು, ಸದಾ ಪ್ರಾಪ್ತಿಗಳ ಹಾಗೂ ಗುಣಗಳ ಮಹಿಮೆಯ ಗೀತೆಯನ್ನು ಹಾಡುವವರು, ಸದಾ ಸೆಕೆಂಡಿನ ಯಥಾರ್ಥ ರೀತಿಯ ಮೂಲಕ ಸಹಜಯೋಗಿಯಾಗುವವರು, ಈ ರೀತಿ ಸದಾ ದಯಾಹೃದಯಿ, ಕಷ್ಟವನ್ನು ಸಹಜವನ್ನಾಗಿ ಮಾಡುವಂತಹ ನಿದ್ರಾಜೀತ್, ಚಕ್ರವರ್ತಿ, ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 06-02-1980.

***ಅಶರೀರಿಯಾಗುವ ಸಹಜ ವಿಧಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನೊಳಗಿನ ವಿಶೇಷತೆಗಳು ತಂದೆಯ ಸಮಾನವಾಗಿರುವ ಸಮೀಪ ರತ್ನ.

2. ನಾನು ಬಂಧನ ಮುಕ್ತವಾಗಿ ಯೋಗಯುಕ್ತವಾಗಿ ಇದ್ದೇನೆ.

3. ನನಗೆ ಒಬ್ಬ ಶಿವ ತಂದೆಯ ಹೊರತು ಮತ್ತಾರು ಇಲ್ಲ.

4. ನಾನು ಸತ್ಯವಾದ ಪ್ರೀತಿ, ಸತ್ಯವಾದ ಮಿತ್ರತ್ವದಿಂದ ಸ್ವಯಂನ್ನು ಮರೆತು, ಹೃದಯದ (ಮನಸ್ಪೂರ್ವಕ) ಗೀತೆಯಿಂದ ನನ್ನನ್ನು ನಾನು ಮತ್ತು ಸಮಯವನ್ನು ಕೂಡ ಮರೆತು ಯಥಾರ್ಥ ರೀತಿಯಿಂದ ಅಶರೀರಿಯಾಗಿದ್ದೇನೆ.

5. ನಾನು ಬಾಬಾ ಎಂಬ ಆತ್ಮಿಕ ಬಾಂಬಿನಿಂದ ಶರೀರವನ್ನು ಮರೆತಿದ್ದೇನೆ.

6. ನಾನು ಸತ್ಯವಾದ ಮಿತ್ರನ ಜೊತೆಯಲ್ಲಿ ಸದಾ ವಿಶ್ರಾಂತಿಯಾಗಿ ಇದ್ದೇನೆ.

7. ನಾನು ತಂದೆಯಿಂದ ಪ್ರಾಪ್ತಿ ಯಾಗಿರುವ ಸರ್ವಪ್ರಾಪ್ತಿಗಳು, ಮತ್ತು ಗುಣಗಳ ಹಾಡನ್ನು ಹಾಡುತ್ತಾ ಸಂತೋಷದ(ಖುಷಿ) ಅನುಭವವನ್ನು ಮಾಡಿಕೊಂಡು ಸಹಜವಾಗಿ ಆಶರೀರಿಯಾಗಿದ್ದೇನೆ.

8. ನಾನು ಯಥಾರ್ಥ ರೀತಿ ಅಥವಾ ಪದ್ದತಿಯಿಂದ ಕಷ್ಟವನ್ನು ಸಹಜವಾಗಿ ಮಾಡಿಕೊಂಡಿದ್ದೇನೆ.

9. ನಾನು ವಿಶ್ವದ ಕಷ್ಟವನ್ನು ಸಹಜ ಮಾಡುವ ಸಹಜಯೋಗಿ.

10. ನಾನು ಸಹಜ ಯೋಗಿಯಾಗಿ, ಸ್ವಯಂ ಮತ್ತು ಇತರರ ಪ್ರತಿ ದಯಾ ಹೃದಯಯಾಗಿ, ಸಿಂಹಾಸನಾಧಿಕಾರಿಯಾಗಿ, ಆಜ್ಞಾಕಾರಿಯಾಗಿ ಪ್ರತಿದಿನ ಅಮೃತ ವೇಳೆ ಭಾಗ್ಯವಿಧಾತ ಬಾಬಾರವರಿಂದ ಸಫಲತಾ ತಿಲಕವನ್ನು ಇಟ್ಟುಕೊಂಡಿದ್ದೇನೆ.

11. ನಾನು ಭಕ್ತರ ಬಾಯರಿರುವ, ದುಃಖಿ ಆತ್ಮರ ಕೂಗಿನ ಧ್ವನಿಯನ್ನು ಕೇಳಿ ಸದಾ ಜಾಗೃತಿ ಜ್ಯೋತಿಯಾಗಿರುತ್ತಾ ಸಾಕ್ಷಾತ್ಕಾರ ಮೂರ್ತಿಯಾಗಿ ಭಕ್ತರಿಗೆ ಸಾಕ್ಷಾತ್ಕಾರವನ್ನು ಮಾಡಿಸಿರುವ ಚಕ್ರವರ್ತಿಯಾಗಿದ್ದೇನೆ.